ಮತ್ತು ಕೃತಿಯ ಒಟ್ಟಾರೆ ವಿನ್ಯಾಸ, ಕನ್ನಡದ ಕೃತಿಗಳ ಮೊತ್ತದಲ್ಲಿ ಇದು ಯಾಕೆ ಎದ್ದು ಕಾಣುತ್ತದೆ ಅನ್ನುವುದನ್ನು ಮೇಲಿನಿಂದ ಚಾರಿತ್ರಿಕ, ಸಾಂಸ್ಕೃತಿಕ, ತಾತ್ವಿಕ ಇಂಥ - ಇಕ - ಬೆಟ್ಟದ ಶಿಖರದಿಂದ ನೋಡುವ ಶಕ್ತಿಯನ್ನೂ ಪಡೆದಿರಬೇಕು. 'ಕೃತಿಕಾರರಿಗಿಂತ ಕೃತಿಯು ಮುಖ್ಯವಾಗಬೇಕು' ನಾವು ವಿದ್ಯಾರ್ಥಿಗಳಾಗಿ ಕಲಿತೆವೆಂದು ಭಾವಿಸಿದ್ದ ಈ ಪಾಠವನ್ನು ಕೆ.ವಿ.ಎನ್. ಮತ್ತೆ ಈಗ 'ಹೊಸ ಓದುಗರಿಗೆ ಕುವೆಂಪು' ಪುಸ್ತಕದಲ್ಲಿ ಮಾಡಿದ್ದಾರೆ. ಲೋಕವನ್ನು ಹೊಸ ನೋಟದಲ್ಲಿ, ಹೊಸ ನೆರಳು ಬೆಳಕಿನಲ್ಲಿ ತೋರಿಸುವ ಕಥೆ, ಕಾದಂಬರಿ, ಕವಿತೆಯಂತೆಯೇ ನುಡಿಲೋಕವನ್ನು ಹೊಸ ಬಗೆಯಲ್ಲಿ ಆಪ್ತವಾಗಿ ನೋಡಲು ತೊಡಗಿಸುವ ವಿಮರ್ಶೆಯ ಕೃತಿ ಕೂಡ ಮುಖ್ಯವೇ. ಅದೇ ಕೆಲಸವನ್ನು ಸಮರ್ಪಕವಾಗಿ ಮಾಡುವ ಅನುವಾದವೂ ಅಷ್ಟೇ ಮುಖ್ಯ. ಇವೆರಡೂ ವಿವರ ಮತ್ತು ವಿನ್ಯಾಸಗಳನ್ನು ಗ್ರಹಿಸುವ ಪ್ರಯತ್ನದ ಎರಡು ಮುಖಗಳು. ಕನ್ನಡದ ಕವಿಗಳು ಹೇಳಿದ ಹಾಗೆ 'ತಳಕ್ಕಿಳಿದು ಮೇಲೆದ್ದು ಬರುವ' ಅಥವಾ 'ಮುಳುಗುವ' ಮತ್ತು 'ಮೇಲೆ ಹಾರುವ ಶಕ್ತಿ'ಯನ್ನು ಬಯಸುವ ಕೆಲಸಗಳು.

◆ **ಸಹಜ, ಸರಳ ಭಾಷೆಯನ್ನು ಅನುವಾದದಲ್ಲಿ ಬಳಕೆ ಮಾಡುತ್ತೀರಿ, ವಿಮರ್ಶೆಯ ಪರಿಭಾಷೆಯನ್ನು ಕೊಟ್ಟು ಯಾವ ಲೇಬಲ್ಲಿಗೂ ಸಿಕ್ಕದ ಹಾಗೆ ಇರುತ್ತೀರಿ. ಇಂದು ಬರಹಗಾರ, ಓದುಗ ಎಲ್ಲರೂ ಲೇಬಲ್ಲುಗಳನ್ನು ಅಂಟಿಸಿಕೊಂಡು ಸಂತಸಪಡುತ್ತಿರುವ ಯುಗದಲ್ಲಿ ನಿಮ್ಮ ನಡೆ ವಿಶೇಷ ಅನಿಸುತ್ತದೆ...**

ಲೇಬಲ್ಲುಗಳನ್ನು, ಪರಿಭಾಷೆಗಳನ್ನು ಮರೆತು ನೋಡಿ. ಯಾವುದೇ ಬರವಣಿಗೆಯ ಮೂಲಕ ಹೊಸ ಲೋಕವನ್ನು ಸೃಷ್ಟಿಸುವ ಮನುಷ್ಯ ಸಾಮರ್ಥ್ಯಕ್ಕೆ ಬೆಲೆ ಇಲ್ಲವಾಗುವುದು ಸಾಧ್ಯವೇ ಇಲ್ಲ. ಆ ಭರವಸೆಯೂ ಇರದಿದ್ದರೆ ಬದುಕುವುದು ಅಸಾಧ್ಯವಾದೀತು. 'ಯಾವುದೇ ಸಿದ್ಧಾಂತವನ್ನು ಮರುಮಾತಿಗೆ ಎಡೆಯಿರದ ಹಾಗೆ ಸ್ಥಾಪಿಸುವುದಕ್ಕೆ ನನಗೆ ಆಸಕ್ತಿ ಇಲ್ಲ. ನಾಳೆಯೋ, ಮುಂದಿನ ಶತಮಾನದ ಮಕ್ಕಳೋ ನನ್ನ ಬರಹವನ್ನು ಓದಿ, ಬದುಕು ಎಷ್ಟು ಅಮೂಲ್ಯವೆಂದು ಬದುಕಿನ ಬಗ್ಗೆ ಪ್ರೀತಿ ಹುಟ್ಟಿಸಿಕೊಳ್ಳುವಂತಾದರೆ ಅಂತಹ ಬರಹ ಮಾಡಲು ಬದುಕನ್ನೇ ಮೀಸಲಾಗಿಡುತ್ತೇನೆ' ಎಂದು ಟಾಲ್‌ಸ್ಟಾಯ್ ಹೇಳಿದ್ದನಲ್ಲ ಅದು ಬಹಳ ದೊಡ್ಡ ಮಾತು ಅನಿಸುತ್ತದೆ. ಹಾಗೆಯೇ 'ಬದುಕಿನ ಎಲ್ಲಾ ಸಮಸ್ಯೆಗೆ ಪರಿಹಾರ ಒದಗಿಸುವುದು ಲೇಖಕರು ಮಾಡಬೇಕಾದ ಕೆಲಸವಲ್ಲ. ಮನುಷ್ಯರ ಕೈಯಲ್ಲಿ ಆಗದೆ ಇರುವ ಕೆಲಸ ಕೂಡ ಇರುತ್ತವೆ ಅಂತ ಮಕ್ಕಳಿಗೂ ಗೊತ್ತು, ಅದಕ್ಕೇ ಮಕ್ಕಳಿಗಾಗಿ ಬರೆಯುತ್ತೇನೆ' ಅಂದ ಸಿಂಗರ್‌ನ ಮಾತೂ ಮುಖ್ಯ. ನನ್ನೊಳಗಿನ ಮಗು ಜೀವಂತವಾಗಿರುವವರೆಗೆ ಬದುಕು ಉತ್ಸಾಹ ಹುಟ್ಟಿಸುತ್ತದೆ, ಸಾಹಿತ್ಯದ ಓದಿಗೆ ಅರ್ಥ ಇರುತ್ತದೆ. ಪರಿಭಾಷೆ ಇವೆಲ್ಲ ಹೆಸರುಗಳು ಅಷ್ಟೇ. ಯಾವ ಹೆಸರೂ ನಿಜವಲ್ಲ, ಬರೀ ರೂಢಿ.

◆ **ಬಹಳಷ್ಟು ಸಮಯ ನಿಮ್ಮೊಡನೆ ಸಾಹಿತ್ಯ, ಯುಗಧರ್ಮ, ಸಾಹಿತ್ಯ ವಿಮರ್ಶೆ ಮತ್ತು ಅನುವಾದಗಳ ಕುರಿತು ಮಾತನಾಡಿದೆ. ನೀವು ವಚನಗಳ ಜೊತೆ ನಿಕಟವಾಗಿ ಕಳೆಯುವ ಸಮಯವನ್ನು ನಾನು ಪಡೆದಿದ್ದೇನೆ. ತಮ್ಮೊಡನೆ ಮಾತನಾಡಿ ಬಹಳ ಸಂತೋಷವಾಯಿತು. ತಮಗೆ ನಮಸ್ಕಾರಗಳು.**

ಮನಸಿನೊಳಗೆ ಒಂದು ಟ್ರಿಪ್ ಹೋಗುವ ಹಾಗೆ ಮಾಡಿದ್ದೀರಿ. ಥ್ಯಾಂಕ್ಯೂ. ●



ಚಿತ್ರ: ಸವಿತಾ ಬಿ.ಆರ್.